# Veda International School

Kusugal Road, Hubballi

(Proposed ICSE Board)

CLASS : 5 SUBJECT : KANNADA

## 4. ಸಂತಮ್ಮಣ್ಣ

- ಆರಗ ಲಕ್ಷ್ಮಣರಾಯರು

**ಕೃತಿಕಾರರ ಪರಿಚಯ**: ಆರಗ ಲಕ್ಷ್ಮಣರಾಯರು

ಸ್ಥಳ: ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ

ಕಾಲ : 1893- 1959.

ಕಾವ್ಯನಾಮ: ಹೊಯಿಸಳ

ಕೃತಿಗಳು: 'ಏಳುವ ಹೊತ್ತು', 'ಕಂಕಣ', 'ಮಗುವಿನ ಕೂಗು', 'ಚಂದಮಾಮ', 'ಕೋಲು ಕುದುರೆ' ಮುಂತಾದವು

**I. ಪದಗಳ ಅರ್ಥ** :

ಕಲ್ಯಾಣ ಸೇವೆ – ಒಂದು ಬಗೆಯ ಸಿಹಿ

ದಾಂಡು - ಕ್ರಿಕೆಟಿನ ಬ್ಯಾಟು

ಪುಟ್ಾಣಿ ಪುರಿ - ಕಡಲೇ ಪುರಿ

ಸಂಜೆಯ ಶುಕ್ರ - ಕತ್ತಲಲ್ಲಿ ಹೊಳೆಯುವ ಶುಕ್ರಗ್ರಹದ ಬೆಳಕು

ಪಠಾಸು ಪೆಟ್ಟು - ಪಟಾಕಿ ಶಬ್ದ ಬರುವ ಬಿದಿರಿನ ಸಾಧನ

ಕತ್ತುರಿ - ಕಸ್ತೂರಿ, ಒಂದು ಬಗೆಯ ಸುಗಂಧ ದ್ರವ್ಯ

**II ಪ್ರಶ್ನೆಗಳು** :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕಲ್ಯಾಣ ಸೇವೆ ಎಲ್ಲಿತ್ತು?

ಉತ್ತರ : ಕಲ್ಯಾಣ ಸೇವೆ ಜೇಬಿನ ಬುಡದಲ್ಲಿತ್ತು

2. ಸಂತಮ್ಮಣ್ಣನ ಎಡ ಬಲದಲ್ಲಿ ಏನಿದ್ದವು?

ಉತ್ತರ : ಸಂತಮ್ಮಣ್ಣನ ಎಡ ಬಲದಲ್ಲಿ ಚೆಂಡು ದಾಂಡು ಇದ್ದವು. +

3. ಕತ್ತುರಿ ಚಂದ್ರ ಎಲ್ಲಿದೆ?

ಉತ್ತರ : ಕತ್ತುರಿ ಚಂದ್ರ ಹಣೆಯಲ್ಲಿದೆ

4. ಸಂತಮ್ಮಣ್ಣ ಮರು ಮಾತಾಡಿದರೆ ಹೇಗಿರುತ್ತದೆ?

ಉತ್ತರ : ಸಂತಮ್ಮಣ್ಣ ಮರು ಮಾತಾಡಿದರೆ ಸಿಡಿಲು ಗುಡುಗಿನ ಹಾಗೆ ಇರುತ್ತದೆ.

5. ತುಂಟರ ಗುರು ಯಾರು?

ಉತ್ತರ : ತುಂಟರ ಗುರು ಸಂತಮ್ಮಣ್ಣ

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸಂತಮ್ಮಣ್ಣನ ಜೇಬಿನ ಬುಡದಲ್ಲಿ ಏನೇನು ಇದ್ದವು?

ಉತ್ತರ : ಸಂತಮ್ಮಣ್ಣನ ಜೇಬಿನ ಬುಡದಲ್ಲಿ ಕಲ್ಯಾಣ ಸೇವೆ, ಪುಟಾಣಿಯ ಪುರಿ, ಗೋಲಿ, ಬಳಪ ಇದ್ದವು.

2. ಪಠಾಸು ಪೆಟ್ಲು ಮತ್ತು ಕಾಸಿನ ಸಾಲುಗಳು ಎಲ್ಲಿದ್ದವು?

ಉತ್ತರ : ಪಠಾಸು ಪೆಟ್ಟು ಒಳಜೇಬಿನಲ್ಲಿ ಮತ್ತು ಕಾಸಿನ ಸಾಲುಗಳು ಕಳ್ಳಜೇಬಲ್ಲಿ ಇದ್ದವು.

3. ಸಂತಮ್ಮಣ್ಣನ ಹಣೆ, ಕಣ್ಣು, ಗಲ್ಲಗಳನ್ನು ಹೇಗೆ ವರ್ಣನೆಗೊಂಡಿವೆ?

ಉತ್ತರ : ಸಂತಮ್ಮಣ್ಣನ ಹಣೆಯಲ್ಲಿ ಕತ್ತುರಿ ಚಂದ್ರವಿದೆಯೆಂದು, ಕಣ್ಣಿನಲ್ಲಿ ಸಂಜೆಯ ಶುಕ್ರವಿದೆಯೇಂದು, ಬೆಳುಬೆಟ್ಟಿಂಗಳು ಗಲ್ಲದ ಮೇಲಿದೆ ಎಂದು ವರ್ಣನೆಗೊಂಡಿವೆ

4. ನಿಸರ್ಗದ ಯಾವೆಲ್ಲ ಸಂಗತಿಗಳೊಂದಿಗೆ ಸಂತಮ್ಮಣ್ಣನನ್ನು ಹೋಲಿಸಲಾಗಿದೆ?

ಉತ್ತರ : ನಿಸರ್ಗದ ಸಂಗತಿಗಳಾದ ಕತ್ತುರಿ ಚಂದ್ರ, ಬೆಳುಬೆಟ್ಟಿಂಗಳು, ಸಂಜೆಯ ಶುಕ್ರ, ಹೂವಿನ ಮುತ್ತು, ಸಿಡಿಲು ಗುಡುಗು, ಆನೆಯ ಕಲ್ಮಳೆ, ಸುಂಟರಗಾಳಿ ಇವುಗಳೊಂದಿಗೆ ಸಂತಮ್ಮಣ್ಣನನ್ನು ಹೋಲಿಸಲಾಗಿದೆ.

**ಆ) ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ, ಬರೆಯಿರಿ**.

1. ಗೋಲಿ ಬಳಪ : ಅಂಗಡಿಯವನು ನನಗೆ ಬಣ್ಣ ಬಣ್ಣದ ಗೋಲಿ ಬಳಪಗಳನ್ನು ತೋರಿಸಿದನು.

2. ಚೆಂಡು ದಾಂಡು: ನನಗೆ ಚೆಂಡು ದಾಂಡು ಆಟ ಆಡಲು ತುಂಬಾ ಇಷ್ಟ.

3. ಬೆಳ್ದಿಂಗಳು: ಮನೆಯಂಗಳದಲ್ಲಿ ಚಂದ್ರನ ಬೆಳ್ದಿಂಗಳಿನ ಬೆಳಕು ಚೆಲ್ಲುತ್ತಿತ್ತು

4. ಸುಂಟರಗಾಳಿ: ಸುಂಟರಗಾಳಿಯಿಂದಾಗಿ ನಮ್ಮ ಮನೆ ಮುಂದಿನ ಅಂಗಳ ಧೂಳಿನಿಂದ ಆವೃತವಾಗಿತ್ತು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ**.

1) ಎಡ X ಬಲ

2).ಬುಡ X ತುದಿ

3).ಬಂದ X ಹೋದ.

4)ದೊಡ್ಡ X ಸಣ್ಣ

5)ಮೇಲೆXಕೆಳಗೆ

6) ಒಳ Xಹೊರ